ಕಾಸಿದ್ರೆ ಕೈಲಾಸ

# ಇಪಿಎಸ್ ಅಡಿ ಹೆಚ್ಚಿನ ಪಿಂಚಣಿ: ಒಳ್ಳೆ ಆಯ್ಕೆಯೇ?



**ಹೆಚ್ಚಿನ ಪಿಂಚಣಿ ಬಯಸುವವರಿಗೆ ಕಾರ್ಮಿಕ ಭವಿಷ್ಯ ನಿಧಿ ಅವಕಾಶವೊಂದನ್ನು ಕಲ್ಪಿಸಿದೆ. ಈ ಯೋಜನೆಯ ಸಾಧಕ ಬಾಧಕಗಳು ಹಾಗೂ ಅದು ಯಾರಿಗೆ ಸೂಕ್ತ ಎನ್ನುವುದರ ಬಗ್ಗೆ ಭಿನ್ನ ಅಭಿಪ್ರಾಯಗಳಿವೆ. ಅಧಿಕ ಪಿಂಚಣಿ ಯೋಜನೆ ಅಥವಾ ಯಥಾಸ್ಥಿತಿ ಮುಂದುವರಿಕೆಯ ಬಗ್ಗೆ ತೀರ್ಮಾನ ಕೈಗೊಳ್ಳುವ ಮುನ್ನ ವೈಯಕ್ತಿಕ ಹಣಕಾಸಿನ ಸಾಧ್ಯತೆಗಳ ಬಗ್ಗೆ ಯೋಚಿಸುವುದು ಉತ್ತಮ.**

**■ ವಿಜಯ್ ಜೋಷಿ**

ಉದ್ಯೋಗಿಗಳ ಪಿಂಚಣಿ ಯೋಜನೆಯ (ಇಪಿಎಸ್) ಅಡಿಯಲ್ಲಿ ಹೆಚ್ಚಿನ ಪಿಂಚಣಿ ಪಡೆಯಲು ಅರ್ಜಿ ಸಲ್ಲಿಸಲು ಇದ್ದ ಕಡೆಯ ದಿನಾಂಕವನ್ನು ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್ಒ) ಮೇ 3ರವರೆಗೆ ವಿಸ್ತರಣೆ ಮಾಡಿದೆ. ಇದರ ಪರಿಣಾಮವಾಗಿ, ಈ ಯೋಜನೆಗೆ ಅರ್ಜಿಯನ್ನು ತುಸು ನಿರಾಳವಾಗಿ ಸಲ್ಲಿಸಲು ಒಂದಿಷ್ಟು ಕಾಲಾವಕಾಶ ಸಿಕ್ಕಂತಾಗಿದೆ. ಅಷ್ಟೇ ಅಲ್ಲದೆ, ಯೋಜನೆಗೆ ಅರ್ಜಿ ಸಲ್ಲಿಸಬೇಕೇ ಎಂಬ ಬಗ್ಗೆ ಸಾವಧಾನವಾಗಿ ಆಲೋಚಿಸಲು ಕೂಡ ಇನ್ನೊಂದಿಷ್ಟು ಸಮಯ ಸಿಕ್ಕಂತಾಗಿದೆ!

ಹೆಚ್ಚಿನ ಪಿಂಚಣಿಗೆ ಅರ್ಜಿ ಸಲ್ಲಿಸುವುದು ಎಲ್ಲರ ಪಾಲಿಗೂ ಅಷ್ಟೊಂದು ಲಾಭದಾಯಕ ಆಗಲಿಕ್ಕಿಲ್ಲ ಎಂದು ಹಣಕಾಸು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಅಭಿಪ್ರಾಯಕ್ಕೆ ಅವರು ನಿರ್ದಿಷ್ಟ ಕಾರಣಗಳನ್ನು ಪಟ್ಟಿ ಮಾಡಿದ್ದಾರೆ. ಆದರೆ, ನಿವೃತ್ತಿಗೆ ಹತ್ತಿರವಾದವರು ಹಾಗೂ ಮಾರುಕಟ್ಟೆ ಆಧಾರಿತ ಪಿಂಚಣಿ ಯೋಜನೆಗಳ ಬಗ್ಗೆ ಅಷ್ಟೊಂದು ಒಲವು ಇಲ್ಲದವರು 'ಇಪಿಎಸ್ ಅಡಿ' ಹೆಚ್ಚಿನ ಪಿಂಚಣಿ ಆಯ್ಕೆ ಮಾಡಿಕೊಳ್ಳುವುದು ಸೂಕ್ತ ಎನ್ನುವುದು ತಜ್ಞರ ಅಭಿಮತ.

ಹೆಚ್ಚಿನ ಪಿಂಚಣಿಗೆ ಆಯ್ಕೆ ಮಾಡಿಕೊಂಡರೆ, 'ಇಪಿಎಸ್'ಗೆ ಹೆಚ್ಚಿನ ವಂತಿಗೆಯನ್ನು ಕೊಡಬೇಕಾಗುತ್ತದೆ. ಹೆಚ್ಚಿನ ವಂತಿಗೆಯನ್ನು ನೌಕರ ಪಿ.ಎಫ್. ಸದಸ್ಯನಾದ ದಿನದಿಂದ ಅಥವಾ 2014ರ ಸೆಪ್ಟೆಂಬರ್ 1ರಿಂದ (ಇವೆರಡರಲ್ಲಿ ಯಾವುದು ತಡವೋ ಅದು) ಪೂರ್ವಾನ್ವಯವಾಗುವಂತೆ ಕೊಡಬೇಕಾಗುತ್ತದೆ.

ಹಿಂಬಾಕಿ ಮೊತ್ತವನ್ನು ಇಪಿಎಫ್ಒ, ನೌಕರನ ಪಿ.ಎಫ್. ಖಾತೆಯಿಂದ ಕಡಿತ ಮಾಡಿಕೊಂಡು, ಇಪಿಎಸ್ ನಿಧಿಗೆ ವರ್ಗಾವಣೆ ಮಾಡುತ್ತದೆ. ಆಗ ಪಿ.ಎಫ್. ಮೊತ್ತ ಕಡಿಮೆ ಆಗುತ್ತದೆ. ಅಲ್ಲದೆ, ಪಿ.ಎಫ್.ನಿಂದ ಕಡಿತವಾಗುವ ಮೊತ್ತಕ್ಕೆ ಸಿಗುವ ಬಡ್ಡಿ ಹಾಗೂ ಚಕ್ರಬಡ್ಡಿಯ ಪ್ರಯೋಜನಗಳು ಇಲ್ಲವಾಗುತ್ತವೆ. ನೌಕರನ ಸೇವಾವಧಿಯು ಕಡಿಮೆ ಇದ್ದರೆ, ಬಡ್ಡಿ ಹಾಗೂ ಚಕ್ರಬಡ್ಡಿ ಹೆಚ್ಚು ನಷ್ಟವಾಗುವುದಿಲ್ಲ. ಆದರೆ, ಹೆಚ್ಚಿನ ಸೇವಾವಧಿ ಹೊಂದಿರುವವರಿಗೆ ಹೆಚ್ಚಿನ ಮೊತ್ತ ನಷ್ಟವಾಗಬಹುದು. ಇಪಿಎಸ್‌ಗೆ ವರ್ಗಾವಣೆ ಆದ ಮೊತ್ತಕ್ಕೆ ಬಡ್ಡಿ ಇರುವುದಿಲ್ಲ.

"ಪಿ.ಎಫ್.ನಲ್ಲಿ ಹೆಚ್ಚಿನ ಮೊತ್ತ ಇರುವಂತೆ ನೋಡಿಕೊಂಡರೆ ಆಕರ್ಷಕ ಬಡ್ಡಿ ಸಿಗುತ್ತದೆ. ಪಿ.ಎಫ್.ನಲ್ಲಿ ಸಂಗ್ರಹವಾಗುವ ಮೊತ್ತವನ್ನು ಬಳಸಿ ನೌಕರನು ನಿವೃತ್ತಿಯ ನಂತರದಲ್ಲಿ 'ಪಿಂಚಣಿ ಯೋಜನೆ'ಯನ್ನು (ಆನ್ಯುಟಿ) ಖರೀದಿಸಬಹುದು. 'ಇಪಿಎಸ್'ಗೆ ಹಣ ಒಮ್ಮೆ ವರ್ಗಾವಣೆ ಆದ ನಂತರದಲ್ಲಿ ಅದನ್ನು ಹಿಂದಕ್ಕೆ ಪಡೆಯಲು ಅವಕಾಶ ಇಲ್ಲ. ಹೀಗಾಗಿ, ಈಗಿರುವ ಯೋಜನೆಯಲ್ಲಿಯೇ ಮುಂದುವರಿದು ಪಿಂಚಣಿಗಾಗಿ 'ರಾಷ್ಟ್ರೀಯ ಪಿಂಚಣಿ' ಯೋಜನೆಯನ್ನು (ಎನ್‌ಪಿಎಸ್) ಆಶ್ರಯಿಸುವುದು ಸೂಕ್ತ" ಎಂದು ಹಣಕಾಸು ತಜ್ಞ ವಸಂತ್ ಹೆಗಡೆ ಹೇಳುತ್ತಾರೆ.

ಇಪಿಎಸ್ ಅಡಿ ಸಿಗುವ ಪಿಂಚಣಿಗೆ ತೆರಿಗೆ ಅನ್ವಯವಾಗುತ್ತದೆ. ಆದರೆ ನಿವೃತ್ತಿಯ ಕೊನೆಯಲ್ಲಿ ಸಿಗುವ ಪಿ.ಎಫ್. ಇಡುಗಂಟಿಗೆ ತೆರಿಗೆ ವಿನಾಯಿತಿ ಇರುತ್ತದೆ.

ಹೆಚ್ಚಿನ ಸೇವಾವಧಿ ಇರುವ ನೌಕರರು ಪಿಂಚಣಿಗಾಗಿ ಎನ್‌ಪಿಎಸ್‌ನಲ್ಲಿ ಹಣ ತೊಡಗಿಸುವುದು ಒಳಿತು ಎಂಬ ಅಭಿಪ್ರಾಯವನ್ನು ಹಣಕಾಸು ಸಲಹೆಗಾರರು ನೀಡುತ್ತಾರೆ. ಎನ್‌ಪಿಎಸ್ ಮೂಲಕ ಹಣವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸುವ ಕಾರಣ, ದೀರ್ಘಾವಧಿಯಲ್ಲಿ ಹೆಚ್ಚಿನ ಲಾಭವನ್ನು ಪಡೆಯುವ ಅವಕಾಶ ಇರುತ್ತದೆ. ಎನ್‌ಪಿಎಸ್ ಯೋಜನೆಯಲ್ಲಿ ತೊಡಗಿಸಿರುವ ಹಣಕ್ಕೆ ಸ್ಪರ್ಧಾತ್ಮಕ ಲಾಭಾಂಶ ಸಿಕ್ಕಿರುವುದನ್ನು ಅಂಕಿ–ಅಂಶಗಳೇ ಹೇಳುತ್ತವೆ.

'ಮಾರುಕಟ್ಟೆಯ ಅಪಾಯಗಳಿಗೆ ಒಡ್ಡಿಕೊಳ್ಳಲು ಇಷ್ಟವಿಲ್ಲದವರು ಇಪಿಎಸ್ ಕಡೆ ಮುಖ ಮಾಡಬಹುದು. ಆದರೆ, ಇಪಿಎಸ್‌ನಲ್ಲಿ ತೊಡಗಿಸಿದ ಹಣವು ಬೇರೆ ಯಾವ ಉದ್ದೇಶಕ್ಕೂ ಸಿಗುವುದಿಲ್ಲ. ಇಪಿಎಫ್ ಅಡಿ ಈಗ ಬಹಳ ಆಕರ್ಷಕವಾದ ಬಡ್ಡಿ ಸಿಗುತ್ತಿದೆ. ಹೆಚ್ಚಿನ ಸೇವಾ ಅವಧಿ ಇರುವವರು, ಹಳೆಯ ವ್ಯವಸ್ಥೆಯಲ್ಲಿಯೇ ಉಳಿದುಕೊಂಡು ಆ ಬಡ್ಡಿ ದರದ ಪ್ರಯೋಜನ ಪಡೆದುಕೊಳ್ಳಬಹುದು. 'ವಿಪಿಎಫ್' (ಐಚ್ಛಿಕವಾಗಿ ಪಿ.ಎಫ್. ಖಾತೆಗೆ ಹೆಚ್ಚಿನ